**ಕರ್ನಾಟಕ ಸರ್ಕಾರ**

**ತಾಂತ್ರಿಕ ಶಿಕ್ಷಣ ಇಲಾಖೆ**

ಸಂ. DTE-ADMI0ACM2/21/2025

ಆಯುಕ್ತರವರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ:22-04-2025.

**-:: ಸುತ್ತೋಲೆ ::-**

**ವಿಷಯ:-** 2025–26ನೇ ಸಾಲಿನಲ್ಲಿ ಖಾಸಗಿ ಅನುದಾನರಹಿತ ಪಾಲಿಟೆಕ್ನಿಕ್ ಸಂಸ್ಥೆಗಳು / ಆಡಳಿತ ಮಂಡಳಿಯವರು ಸೀಟುಗಳನ್ನು ಸ್ವ–ಇಚ್ಛೆಯಿಂದ ಸರ್ಕಾರಕ್ಕೆ ಬಿಟ್ಟು ಕೊಡುವ ಬಗ್ಗೆ.

**ಉಲ್ಲೇಖ:-** ಸರ್ಕಾರದ ಆದೇಶ ಸಂ: ಇಡಿ 66 ಟಿಪಿಇ 2012, ದಿ:05-05-2012.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2025–26ನೇ ಶೈಕ್ಷಣಿಕ ಸಾಲಿನಲ್ಲಿ ಸರ್ಕಾರಿ, ಅನುದಾನಿತ ಪಾಲಿಟೆಕ್ನಿಕ್‌ಗಳ ಅನುದಾನಿತ ಬೇಡಿಕೆ ಇರುವ ಡಿಪ್ಲೋಮಾ ಕೋರ್ಸುಗಳಿಗೆ ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳು ಸ್ವ–ಇಚ್ಛೆಯಿಂದ ಸರ್ಕಾರಕ್ಕೆ ಆಧ್ಯರ್ಪಣೆ ಮಾಡುವ ಕೋರ್ಸುವಾರು ಸೀಟುಗಳಿಗೆ ಮಾತ್ರ ಪ್ರವೇಶ ಬಯಸುವ ಅಭ್ಯರ್ಥಿಗಳು ಸಮೀಪದ ಯಾವುದೇ ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರಿಗೆ ಒಂದೇ ಅರ್ಜಿಯನ್ನು ಸಲ್ಲಿಸಬಹುದಾಗಿರುತ್ತದೆ. ಕಾಲೇಜು ಮತ್ತು ಕೋರ್ಸುಗಳ ಆಯ್ಕೆಗಳನ್ನು ಅವರ ಇಚ್ಛಾನುಸಾರ ಆದ್ಯತಾ ಪಟ್ಟಿಯಲ್ಲಿ (Priority Sheet) ನಮೂದಿಸಿದಂತೆ ಅಭ್ಯರ್ಥಿಗಳು ನೀಡುವ ಆಧ್ಯತೆಯನುಸಾರ ಮೆರಿಟ್ ಹಾಗೂ ರೋಷ್ಟರ್‌ಗನುಗುಣವಾಗಿ **"ಆನ್–ಲೈನ್"** ಮೂಲಕ ಸೀಟು ಹಂಚಿಕೆಯನ್ನು ನಡೆಸಲಾಗುತ್ತದೆ.

ಮುಂದುವರೆದಂತೆ, ಖಾಸಗಿ ಅನುದಾನರಹಿತ ಪಾಲಿಟೆಕ್ನಿಕ್ ಸಂಸ್ಥೆಗಳು ಸೀಟುಗಳನ್ನು ಸ್ವ-ಇಚ್ಛೆಯಿಂದ ಪ್ರವೇಶ ಪ್ರಕ್ರಿಯೆಗೆ ಮುನ್ನ ಸರ್ಕಾರಕ್ಕೆ ಬಿಟ್ಟುಕೊಟ್ಟಲ್ಲಿ ಅಂತಹ ಸೀಟುಗಳನ್ನು ಮೆರಿಟ್ ಹಾಗೂ ರೋಷ್ಟರ್ ಆಧಾರದ ಮೇಲೆ ಪ್ರವೇಶಾತಿ ಮಾಡಲು ಅವಕಾಶ ಕಲ್ಪಿಸಲಾಗಿರುವುದರಿಂದ, ಪ್ರವೇಶ ಬಯಸುವ ಖಾಸಗಿ ಅನುದಾನರಹಿತ ಪಾಲಿಟೆಕ್ನಿಕ್ ಸಂಸ್ಥೆಗಳು / ಆಡಳಿತ ಮಂಡಳಿಯವರು ಡಿಪ್ಲೋಮಾ ಪ್ರವೇಶ ಬಯಸುವ ಅಭ್ಯರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಪರಿಗಣಿಸಿ, ಸೀಟುಗಳನ್ನು ಸ್ವ-ಇಚ್ಛೆಯಿಂದ ಸರ್ಕಾರಕ್ಕೆ ಆಧ್ಯಾರ್ಪಣೆ ಮಾಡುವ ನಿಟ್ಟಿನಲ್ಲಿ ಈ ಸುತ್ತೋಲೆಗೆ ಲಗತ್ತಿಸಿರುವ ಷರತ್ತುಗಳನ್ನು ಒಪ್ಪಿ ಅಥವಾ ಒಪ್ಪಂದ ವ್ಯವಸ್ಥೆಗೆ Rs.100/-ರ ಛಾಪ ಕಾಗದಲ್ಲಿ ಅಫಿಡವಿಟ್ (Affidavit)ಮೂಲಕ ಶಿಕ್ಷಣ ಸಂಸ್ಥೆ ಅಥವಾ ಸಂಘದವರು ತಮ್ಮ ಒಪ್ಪಿಗೆಯನ್ನು ನೀಡಲು ತಿಳಿಸಲಾಗಿದೆ. ಸಂಸ್ಥೆಯವರು 2025-26ನೇ ಸಾಲಿನ ಎ.ಐ.ಸಿ.ಟಿ.ಇ, ನವದೆಹಲಿ ಇವರಿಂದ ಮುಂದುವರೆಸಿರುವ ಮಾನ್ಯತೆ ಪತ್ರ ಹಾಗೂ ಎಸ್.ಎನ್.ಕ್ಯೂ **(SNQ)** ಕೋಟಾದಡಿ ಸೀಟು ಹಂಚಿಕೆ ಮಾಡಲು ಸಂಸ್ಥೆಯಲ್ಲಿ ಚಾಲ್ತಿಯಲ್ಲಿರುವ ಕೋರ್ಸುಗಳ ಇಂಟೇಕ್ ವಿವರವನ್ನು ಖುದ್ದಾಗಿ (ಮುದ್ದಾಂ) ಅಥವಾ ಕಾಲೇಜು ತಾಂತ್ರಿಕ ಶಿಕ್ಷಣ ಇಲಾಖೆಯ ಇ-ಮೇಲ್: Admacm2025@gmail.com ಗೆ ಸಲ್ಲಿಸಲು ತಿಳಿಸಲಾಗಿದೆ.

ಈಗಾಗಲೇ 2025-26ನೇ ಸಾಲಿನ ಪ್ರಥಮ ಡಿಪ್ಲೋಮಾ ಪ್ರವೇಶ ಪ್ರಕ್ರಿಯೆಯ ಕಾರ್ಯಗಳು ಪ್ರಾರಂಭವಾಗುತ್ತಿರುವುದರಿಂದ ಸಂಬಂಧಪಟ್ಟ ಪಾಲಿಟೆಕ್ನಿಕ್ ಸಂಸ್ಥೆಯವರು ತಮ್ಮ ಒಪ್ಪಿಗೆಯನ್ನು **ದಿ:29-04-2025**ರೊಳಗಾಗಿ ಸಹಾಯಕ ನಿರ್ದೇಶಕರು(ಎಂಪಿಸಿ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು – 560001 ಇವರಿಗೆ ಖುದ್ದಾಗಿ (ಮುದ್ದಾಂ) ಅಥವಾ ಆಯುಕ್ತಾಲಯದ ಇ-ಮೇಲ್: **Admacm2025@gmail.com**ಗೆ ಕೂಡಲೇ ಕಳುಹಿಸುವಂತೆ ತಿಳಿಸಲಾಗಿದೆ.

**ವಿ.ಸೂ:- ನಿಗಧಿತ ದಿನಾಂಕ:29-04-2025ರ ಸಂಜೆ 5.00ಗಂಟೆಗೆಯೊಳಗೆ ಆಯುಕ್ತಾಲಯಕ್ಕೆ ಮುದ್ದಾಂ ಮೂಲಕ ಕಳುಹಿಸಬೇಕು, ತದನಂತರ ಬಂದ ಒಪ್ಪಿಗೆ ಪತ್ರವನ್ನು ಪರಿಗಣಿಸಲಾಗುವುದಿಲ್ಲ.**

Digitally signed by
MANJUSHREE N
Date: 25-04-2025
16:22:45

**ಆಯುಕ್ತರು**
**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**
**ಬೆಂಗಳೂರು**

ಗೆ,

1. ರಾಜ್ಯದ ಎಲ್ಲಾ ಅನುದಾನಿತ/ಖಾಸಗಿ ಅನುದಾನರಹಿತ ಪಾಲಿಟೆಕ್ನಿಕ್ ಪ್ರಿನ್ಸಿಪಾಲರುಗಳಿಗೆ.
2. ಅಧ್ಯಕ್ಷರು, ಕರ್ನಾಟಕ ಪ್ರೈವೇಟ್ ಪಾಲಿಟೆಕ್ನಿಕ್‌ಗಳ ಅಸೋಸಿಯೇಷನ್(ರಿ), ಬೆಂಗಳೂರು.

ಪ್ರತಿ:-

1. ಆಯುಕ್ತರ ಆಪ್ತಶಾಖೆಗೆ ಮಾಹಿತಿಗಾಗಿ.
2. ನಿರ್ದೇಶಕರ ಆಪ್ತಶಾಖೆಗೆ ಮಾಹಿತಿಗಾಗಿ.
3. ಜಂಟಿ ನಿರ್ದೇಶಕರು(ಆಡಳಿತ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
4. ಕಾರ್ಯದರ್ಶಿಗಳು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು.
5. ಸಾರ್ವಜನಿಕ ಸಂಪರ್ಕಾಧಿಕಾರಿಗಳು, ತಾಂ.ಶಿ.ಇ, ಬೆಂಗಳೂರು.
6. ಸಂಯೋಜನಾಧಿಕಾರಿಗಳು, ತಾಂ.ಶಿ.ಇ, (ಈ ಸುತ್ತೋಲೆಯನ್ನು ಇಲಾಖೆಯ ಅಂತರ್ ಜಾಲದಲ್ಲಿ (ವೆಬ್‌ಸೈಟ್) ಪ್ರಚುರಪಡಿಸುವುದು).
7. ಕಛೇರಿ ಪ್ರತಿ.

## 2025-26ನೇ ಶೈಕ್ಷಣಿಕ ಸಾಲಿನಲ್ಲಿ ಮೆರಿಟ್ ಆಧಾರಿತ ಆನ್–ಲೈನ್ ಪ್ರವೇಶಾತಿ ಪ್ರಕ್ರಿಯೆ ಮೂಲಕ ಡಿಪ್ಲೋಮಾ ಪ್ರವೇಶ ಬಯಸುವ ಅಭ್ಯರ್ಥಿಗಳ ಆಯ್ಕೆ ಬಗ್ಗೆ

### *ಸಮ್ಮತಾಭಿಪ್ರಾಯ ವ್ಯವಸ್ಥೆ ಅಥವಾ ಒಪ್ಪಂದಕ್ಕೆ ಒಪ್ಪಿಗೆ ಪತ್ರ*

### (ಖಾಸಗಿ ಅನುದಾನರಹಿತ ಪಾಲಿಟೆಕ್ನಿಕ್ ಸಂಘ/ಸಂಸ್ಥೆಗಳಿಗೆ)

2025-26ನೇ ಸಾಲಿನಲ್ಲಿ ಪ್ರಥಮ ವರ್ಷದ ಡಿಪ್ಲೋಮಾ ಪ್ರವೇಶಕ್ಕೆ ಸಂಬಂಧಿಸಿದಂತೆ, ಸರ್ಕಾರಿ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳ ಬೇಡಿಕೆ ಇರುವ ಡಿಪ್ಲೋಮಾ ಕೋರ್ಸುಗಳಿಗೆ ಮಾತ್ರ ಪ್ರಥಮ ವರ್ಷದ ಡಿಪ್ಲೋಮಾ ಪ್ರವೇಶಾತಿಯನ್ನು **"ಮೆರಿಟ್ ಆಧಾರಿತ ಆನ್‌ಲೈನ್ ಪ್ರವೇಶಾತಿ"** ಮೂಲಕ ತಾಂತ್ರಿಕ ಶಿಕ್ಷಣ ಇಲಾಖೆಯ ವತಿಯಿಂದ ಕರ್ನಾಟಕ ನಿವಾಸಿ ವಿದ್ಯಾರ್ಥಿಗಳ ಮತ್ತು ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ವರ್ಗಗಳ ಹಿತರಕ್ಷಣೆಗಾಗಿ ಸರ್ಕಾರ ನಿಗಧಿಪಡಿಸಿದ ಶುಲ್ಕ ಹಾಗೂ ಮೀಸಲಾತಿ ಪ್ರಕಾರ ಸೀಟು ಹಂಚಿಕೆಯ ಬಗ್ಗೆ ಸಮ್ಮತಾಭಿಪ್ರಾಯ ವ್ಯವಸ್ಥೆ ಅಥವಾ ಒಪ್ಪಂದಕ್ಕೆ ಸಮ್ಮತಿ ಸೂಚಿಸಲು ನನಗೆ / ನಮಗೆ / ಆಡಳಿತ ಮಂಡಳಿ ಅಧಿಕಾರವನ್ನು ನೀಡಿದೆ. ಆನ್‌ಲೈನ್ ಮೂಲಕ ಸರ್ಕಾರಿ ಕೋಟಾದಡಿ ಪ್ರವೇಶ ಪಡೆದ ಅಭ್ಯರ್ಥಿಯು 03 ವರ್ಷಗಳ ಡಿಪ್ಲೋಮಾ ವ್ಯಾಸಂಗವನ್ನು ಪೂರ್ಣಗೊಳಿಸುವವರೆಗೂ ಸರ್ಕಾರವು ನಿಗಧಿಪಡಿಸಿದ ಶುಲ್ಕಕ್ಕಿಂತ ಹೆಚ್ಚುವರಿಯಾಗಿ ಯಾವುದೇ ರೀತಿಯ ಶುಲ್ಕವನ್ನು ಪಡೆಯುವುದಿಲ್ಲವೆಂದು ಒಪ್ಪಿರುತ್ತೇನೆ/ವೆ. ಒಂದು ವೇಳೆ ಹೆಚ್ಚುವರಿ ಶುಲ್ಕವನ್ನು ಪಡೆದದ್ದು ಅಭ್ಯರ್ಥಿಗಳು/ಪೋಷಕರುಗಳಿಂದ ದೂರುಗಳು ಬಂದಲ್ಲಿ, ಮುಂದಿನ ಶೈಕ್ಷಣಿಕ ಸಾಲಿಗೆ ಸ್ವ-ಇಚ್ಛೆಯಿಂದ ಸರ್ಕಾರಕ್ಕೆ ಬಿಟ್ಟು ಕೊಡುವ ಸೀಟುಗಳನ್ನು "ಆನ್‌ಲೈನ್" ಮುಖಾಂತರ ತುಂಬಬಾರದೆಂದು ಈ ಮೂಲಕ ಒಪ್ಪಿರುತ್ತೇನೆ/ವೆ. ನಮ್ಮ ಪಾಲಿಟೆಕ್ನಿಕ್‌ಗಳ ಈ ಕೆಳಕಂಡ ಕೋರ್ಸುಗಳ ಪ್ರವೇಶವನ್ನು "ಮೆರಿಟ್ ಮತ್ತು **ರೋಸ್ಟರ್** ಆಧಾರಿತ ಆನ್‌ಲೈನ್"ಕೌನ್ಸಲಿಂಗ್ ಮುಖಾಂತರ ತುಂಬಲು ಸರ್ಕಾರದ ಮೀಸಲಾತಿ ನಿಯಮಗಳು ಹಾಗೂ ಸರ್ಕಾರ ನಿಗಧಿಪಡಿಸಿದ ಶುಲ್ಕಕ್ಕೆ ಪೂರ್ಣವಾಗಿ ಒಪ್ಪಿರುತ್ತೇನೆ/ವೆ.

| **ಕ್ರ.ಸಂ.** | **ಕೋರ್ಸು** | **ಒಟ್ಟು ಇಂಟೇಕ್** | **ಆನ್-ಲೈನ್ ಮೂಲಕ ತುಂಬುವ ಸೀಟುಗಳ ಸಂಖ್ಯೆ** |
|---|---|---|---|
| | | | |

**<u>ಶುಲ್ಕ ನಿಗಧಿ ಬಗ್ಗೆ:</u>**

ಸರ್ಕಾರದ ಆದೇಶ ಸಂಖ್ಯೆ: ಇಡಿ 119 ಟಿಪಿಇ 2005, ದಿನಾಂಕ 18/10/2005 ಮತ್ತು ಇಡಿ 10 ಟಿಪಿಇ 2012, ದಿ:20-05-2012 ಹಾಗೂ ಹಾಗೂ ಸರ್ಕಾರದ ಪತ್ರ ಸಂ. ಇಡಿ 101 ಟಿಪಿಇ 2018, ದಿ:30-06-2018 ರನ್ವಯ ಖಾಸಗಿ ಅನುದಾನರಹಿತ ಪಾಲಿಟೆಕ್ನಿಕ್‌ಗಳಿಗೆ ಅನ್ವಯವಾಗುವಂತೆ ಕೆಳಕಂಡ ಶುಲ್ಕವನ್ನು ಪಡೆಯಲು ಒಪ್ಪಿರುತ್ತೇನೆ/ವೆ. ಪ್ರಸಕ್ತ ಶೈಕ್ಷಣಿಕ ಸಾಲಿನಿಂದ ಡಿಪ್ಲೋಮಾ ಶಿಕ್ಷಣ ಶುಲ್ಕವು ಪರಿಷ್ಕರಣೆಯು ಸರ್ಕಾರದ ಹಂತದಲ್ಲಿರುವುದರಿಂದ ಸರ್ಕಾರದ ಮುಂದಿನ ಆದೇಶಕ್ಕೆ ಬದ್ಧರಾಗಿರುತ್ತೇವೆ.

| ಖಾಸಗಿ ಪಾಲಿಟೆಕ್ನಿಕ್‌ಗೆ ಅನ್ವಯವಾಗುವಂತೆ | ಬೋಧನಾ ಶುಲ್ಕ | ಇತರೇ ಶುಲ್ಕ | ಅಭಿವೃದ್ಧಿ ಶುಲ್ಕ | ಒಟ್ಟು |
|---|---|---|---|---|
| ಅ)ಕರ್ನಾಟಕದ ಅಭ್ಯರ್ಥಿಗಳಿಗೆ | **12,075/-** | **500/-** | **830/-** | **13,405/-** |

ಸರ್ಕಾರದ ನೀತಿ ನಿಯಮಗಳನ್ವಯ, ಸರ್ಕಾರದ ಆದೇಶಗಳಂತೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ/ ಪ್ರವರ್ಗ-1 ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನ / ಆದಾಯ ಎಲ್ಲಾ ಮೂಲಗಳಿಂದ ರೂ.2.50 ಲಕ್ಷ ಮಿತಿಯೊಳಗೆ, ಮತ್ತು 2-ಎ, 3-ಎ, 3-ಬಿ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನ / ಆದಾಯ ಎಲ್ಲಾ ಮೂಲಗಳಿಂದ ರೂ.1.00 ಲಕ್ಷ ಮಿತಿಯೊಳಗೆ ಇದ್ದಲ್ಲಿ ಅಂತಹ ವಿದ್ಯಾರ್ಥಿಗಳ ಬೋಧನಾ ಶುಲ್ಕವನ್ನು ಪ್ರವೇಶ ಸಮಯದಲ್ಲಿ ಪಡೆಯಲಾಗುವುದಿಲ್ಲ ಹಾಗೂ ನಿಯಮಾನುಸಾರ ಸಂಬಂಧಪಟ್ಟ ಪ್ರಾಧಿಕಾರದವತಿಯಿಂದ ಸದರಿ ವಿದ್ಯಾರ್ಥಿಗಳ ಶುಲ್ಕವನ್ನು ವಿನಾಯಿತಿ/ಮರುಪಾವತಿ ಮಾಡಿಕೊಳ್ಳಲು ಒಪ್ಪಿರುತ್ತೇನೆ/ವೆ.

ಸಹಿ...........................................

ಹೆಸರು.....................................

ಸ್ಥಳ: ಪದನಾಮ.....................................

ದಿನಾಂಕ: ಪಾಲಿಟೆಕ್ನಿಕ್ ಶಿಕ್ಷಣ ಸಂಸ್ಥೆಯ / ಸಂಘದ ಹೆಸರು(ಮೊಹರಿನೊಂದಿಗೆ)